**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಖಾನಾಪೂರ.**

**ಸಿ.ಸಿ ನಂ: 218/2020**

ಪಿ.ಡಬ್ಲ್ಯೂ **- 3**
ಸಿ.ಡಬ್ಲ್ಯೂ **- 10**

ಹೆಸರು : ಬಸಗೌಡಾ ಜೆ ಪಾಟೀಲ

ವಯಸ್ಸು : **41** ವರ್ಷ

ಉದ್ಯೋಗ : ಪೊಲೀಸ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು

ವಾಸ : ಬೆಂಗಳೂರು

ದಿನಾಂಕ 04-03-2025 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಸಸಅ ರವರಿಂದ**

ನಾನು ದಿನಾಂಕ 05-08-2018 ರಿಂದ 26-06-2021 ರ ವರೆಗೆ ಖಾನಾಪುರ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 03.07.2019 ರಂದು ಚಾಸಾ 9 ರವರಿಂದ ಪ್ರಕರಣದ ಮುಂದಿನ ತನಿಖೆಯನ್ನು ಪಡೆದುಕೊಂಡೆನು. ಅದೇ ದಿನ ಚಾಸಾ 5 ರಾಸಾಯನಿಕ ಪರೀಕ್ಷೆಗಾಗಿ ಮುದ್ದೆಮಾಲನ್ನು ಚಾಸಾ 6 ರವರಿಗೆ ಕಳುಹಿಸಿ ಕೊಟ್ಟ ಬಗ್ಗೆ ಸ್ವೀಕೃತಿಯನ್ನು ಮತ್ತು ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡೆನು. ನಂತರ ದಿನಾಂಕ 16.10.2019 ರಂದು ಪ್ರಕರಣದಲ್ಲಿ ಜಪ್ತಾದ ಮುದ್ದೆಮಾಲನ್ನು ಅಬಕಾರಿ ನೀರಿಕ್ಷಕರು ಖಾನಾಪೂರ ವಲಯದವರಿಗೆ Deputy commissioner of Excise Belagavi ಇವರ ಆದೇಶದಂತೆ ಮುದ್ದೆ ಮಾಲನ್ನು ಹಸ್ತಾಂತರಿಸಿರುತ್ತೇನೆ. ನಂತರ ದಿಃ 30.10.2019 ರಂದು ಆರ ಎಫ಼ ಎಸ ಎಲ್ ಬೆಳಗಾವಿಯಿಂದ ಬಂದ ಪ್ರಮಾಣ ಪತ್ರವನ್ನು ಕಡತಕ್ಕೆ ಅಳವಡಿಸಿಕೊಂಡೆನು. ನಂತರ ದಿಃ 22.11.2019 ರಂದು ಪ್ರಕರಣದ ತನಿಖೆ ಪೂರ್ಣಗೊಂಡಿದ್ದರಿಂದ ಹಾಗೂ ಆರೋಪಿತರ

ಮೇಲೆ ಸಾಕಷ್ಟು ಸಾಕ್ಷ್ಯಾಧಾರಗಳು ಲಭ್ಯವಾಗಿದ್ದರಿಂದ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದೇನು. ಸಾಕ್ಷಿದಾರರ ನ್ಯಾಯಾಲಯ ಮುಂದೆ ಇರುವ ಮುದ್ದೆ ಮಾಲು 1 ರಿಂದ 5 ನ್ನು ನೋಡಿ ಗುರುತಿಸಿದ್ದು ಇರುತ್ತದೆ.

ಪಾಟೀ ಸವಾಲುಃ ಶ್ರೀ. ಎನ್ ವಾಯ ಎಂ ವಕೀಲರಿಂದಃ-

ನನ್ನ ತನಿಖೆಯಲ್ಲಿ ಆರೋಪಿತರ ಯಾವುದೇ ತಪ್ಪು ಇರದೇ ಇರುವುದು ಕಂಡು ಬಂದರು ಸಹಿತ ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ತನಿಖೆಯನ್ನು ಮಾಡಿಲ್ಲ ಎಂದು ಸೂಚಿಸಿದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.